# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 566 |
| ಸದಸ್ಯರ ಹೆಸರು | ಶ್ರೀ ಸೂರಜ್ ರೇವಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 11.07.2023 |
| ಉತ್ತರಿಸುವವರು | ಪೌರಾಡಳಿತ ಮತ್ತು ಹಜ್ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಹಾಸನ ಜಿಲ್ಲೆಯ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯವರು ಸ್ವಾಧೀನಪಡಿಸಿಕೊಂಡಿರುವ ನಕ್ಷೆಯಂತೆ ಹಸ್ತಾಂತರಿಸಿರುವ ದೊಡ್ಡ ಬಸವನಹಳ್ಳಿ ಗ್ರಾಮದ ಸರ್ವೆ ನಂಬರ್ 112/2, 102/1, 102/2, 102/3, 100/1, 100/2, 100/3, 100/4, 103/2, 103/3, 101 ಮತ್ತು 99ರ 7ಎಕರೆ 22 ಗುಂಟೆ ಭೂ ಪ್ರದೇಶವನ್ನು ಹಾಸನ ನಗರ ಸಭೆಯವರು ಯಾವ ಉದ್ದೇಶಕ್ಕಾಗಿ ಬಳಸಿರುತ್ತಾರೆ. | ಹಾಸನ ನಗರಸಭೆ ವತಿಯಿಂದ ದೊಡ್ಡ ಬಸವನಹಳ್ಳಿ ಗ್ರಾಮದ ವಿವಿಧ ಸರ್ವೆ ನಂಬರ್‌ನಲ್ಲಿನ 7ಎಕರೆ 22 ಗುಂಟೆ ಭೂ ಪ್ರದೇಶವನ್ನು ಯಾವುದೇ ಉದ್ದೇಶಕ್ಕೆ ಬಳಸಿಕೊಂಡಿರುವುದಿಲ್ಲ. ಆದರೆ ನಗರ ಸಭೆಯ ಕೌನ್ಸಿಲ್ ಸಾಮಾನ್ಯ ಸಭೆ ದಿನಾಂಕ;29-06-2016ರಲ್ಲಿ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ವಸತಿ ರಹಿತರಾದವರಿಗೆ ನಿವೇಶನಗಳನ್ನು ನೀಡಬಹುದೆಂದು ತೀರ್ಮಾನಿಸಲಾಗಿದೆ ಮತ್ತು ದಿನಾಂಕ:-10-02-2021ರಲ್ಲಿ ಆಡಳಿತಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಮೂಲಭೂತ ಸೌಕರ್ಯದ ಜೊತೆಗೆ ವಸತಿಯು ಸಹ ಮುಖ್ಯವಾಗಿರುತ್ತದೆಂದು ತೀರ್ಮಾನಿಸಲಾಗಿರುತ್ತದೆ ಮತ್ತು ಜಿಲ್ಲಾಧಿಕಾರಿ, ಜಿಲ್ಲಾಧಿಕಾರಿಗಳ ಕಾರ್ಯಾಲಯದ ಅಂತಿಮ ಅಧಿಸೂಚನೆ ದಿನಾಂಕ: 23-02-2017ರಂದು ಅಧಿಕೃತವಾಗಿ ಕೊಳಚೆ ಪ್ರದೇಶವೆಂದು ಘೋಷಿಸಲಾಗಿದೆ. |
| ಆ) | ಹಾಸನ ಜಿಲ್ಲೆ ಹಾಸನ ತಾಲ್ಲೂಕು ದೊಡ್ಡ ಬಸವನಹಳ್ಳಿ ಗ್ರಾಮಕ್ಕೆ ಮೂಲಭೂತ ಸೌಕರ್ಯ ಒದಗಿಸಲು ಮೀಸಲಿಟ್ಟಿರುವ 7 ಎಕರೆ 22 ಗುಂಟೆ ಜಮೀನನ್ನು ಹಾಸನ ನಗರ ಸಭೆಯವರು ದುರುಪಯೋಗಪಡಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ ಈ ಸರ್ವೆ ನಂಬರ್ ವಿಸ್ತೀರ್ಣದಲ್ಲಿ ಸಾರ್ವಜನಿಕರಿಗೆ ಅನುಕೂಲವಾಗುವ ಯೋಜನೆ ರೂಪಿಸಲಾಗಿದೆಯೇ ಯಾವ ಮಾನದಂಡ ವನ್ನು ಅನುಸರಿಸಲಾಗಿದೆ. (ಸಂಪೂರ್ಣ ವಿವರ ನೀಡುವುದು). | ಹಾಸನ ನಗರಸಭೆ ವತಿಯಿಂದ ಯಾವುದೇ ದುರುಪಯೋಗವಾಗಿರುವುದಿಲ್ಲ. |
| ಇ) | ಸದರಿ ಗ್ರಾಮದ ಅಭಿವೃದ್ಧಿಗೆ/ ಮೂಲ ಭೂತ ಸೌಲಭ್ಯಕ್ಕಾಗಿ ಮೀಸಲಾಗಿಟ್ಟ ಜಮೀನನ್ನು ಹಾಸನ ನಗರಸಭೆಯವರು ದುರುಪಯೋಗಪಡಿಸಿಕೊಂಡಿರುವುದಕ್ಕೆ ಸರ್ಕಾರ ಕೈಗೊಂಡ ಕ್ರಮವೇನು (ಸಂಪೂರ್ಣ ವಿವರ ನೀಡುವುದು) | ಉದ್ಭವಿಸುವುದಿಲ್ಲ. |

**ಸಂಖ್ಯೆ: ನಅಇ 98 ಜಿಇಎಲ್ 2023(ಇ)**

(ರಹೀಂ ಖಾನ್)
ಪೌರಾಡಳಿತ ಮತ್ತು ಹಜ್ ಸಚಿವರು